# 1363 – E11 – VSC – R – N – 18

FIFTH SEMESTER B.COM. DEGREE EXAMINATION, NOVEMBER 2018
**FINANCIAL SERVICES (Revised)**

Time : 3 Hours] [Max. Marks : 80

***Instructions :*** *1) **All** Sections are **compulsory.***
*2) Answer the questions according to internal choice.*
*3) **Use** of simple calculator is allowed.*
*4) Question **13** (case study) is **compulsory**.*

SECTION – A

1. Answer **any ten** of the following : **(10×2=20)**
ಕೆಳಗಿನ ಬೇಕಾದ ಹತ್ತು ಪ್ರಶ್ನೆಗಳಿಗೆ ಉತ್ತರಿಸಿರಿ :
   a) Define Financial Services.
   ಹಣಕಾಸಿನ ಸೇವೆಗಳು ಇದರ ವ್ಯಾಖ್ಯೆ ಕೊಡಿರಿ.
   b) What are fund based activities ?
   ನಿಧಿ ಆಧಾರಿತ ಚಟುವಟಿಕೆಗಳೆಂದರೇನು ?
   c) What is meant by loan syndication ?
   ಸಾಲದ ಕೂಟ ರಚನೆ ಎಂದರೇನು ?
   d) What is meant by Mutual Fund ?
   'ಪರಸ್ಪರ ನಿಧಿ' ಎಂದರೇನು ?
   e) Expand N.S.D.L. and C.D.S.L.
   ವಿಸ್ತರಿಸಿ : N.S.D.L. ಮತ್ತು C.D.S.L.
   f) Define operating lease.
   ಕಾರ್ಯಾತ್ಮಕ ಗೇಣಿಯ ವ್ಯಾಖ್ಯೆ ನೀಡಿರಿ.
   g) What is meant by Depository Services ?
   ಡೆಪೊಜಿಟರಿ ಸೇವೆಗಳು ಎಂದರೇನು ?
   h) What is online trading ?
   ಅಂತರ್‌ಜಾಲ ವ್ಯವಹಾರ ಎಂದರೇನು ?
   i) Who is factor ?
   ಫ್ಯಾಕ್ಟರ್ ಎಂದರೆ ಯಾರು ?
   j) What is rematerialisation ?
   ಮರುಭೌತೀಕರಣವೆಂದರೇನು ?
   k) What is close ended scheme ?
   ಹೂಡಿಕೆಗೆ ಮುಚ್ಚಿಕೊಳ್ಳುವ ಯೋಜನೆ ಎಂದರೇನು ?
   l) What is credit rating ?
   ಪತ್ತಿನ ದರ್ಜೆ ನಿರ್ಧರಿಸುವಿಕೆ ಎಂದರೇನು ?

[P.T.O.

Scanned by CamScanner

## SECTION – B

Answer **any three** of the following : **(3×5=15)**
ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ :

2. Explain any two fund based financial services.
ಯಾವುದೇ ಎರಡು ನಿಧಿಯಾಧಾರಿತ ಹಣಕಾಸು ಸೇವೆಗಳನ್ನು ವಿವರಿಸಿರಿ.

3. State any five differences between financial lease and operating lease.
ಹಣಕಾಸು ಗೇಣಿ ಮತ್ತು ಕಾರ್ಯಾತ್ಮಕ ಗೇಣಿಗಳ ನಡುವಿನ ಯಾವುದಾದರೂ ಐದು ವ್ಯತ್ಯಾಸಗಳನ್ನು ಬರೆಯಿರಿ.

4. Write a note on C.D.S.L.
ಸಿ.ಡಿ.ಎಸ್.ಎಲ್. ಕುರಿತಾಗಿ ಟಿಪ್ಪಣಿ ಬರೆಯಿರಿ.

5. Discuss different types of lease.
ಗೇಣಿಯ ವಿವಿಧ ಪ್ರಕಾರಗಳನ್ನು ಚರ್ಚಿಸಿರಿ.

6. Distinguish between factoring and forfeiting.
ಫ್ಯಾಕ್ಟರಿಂಗ್ ಮತ್ತು ಫೋರ್‌ಫೇಟಿಂಗ್ ಇವುಗಳ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.

7. Write the functions of depository participant.
ಡಿಪೋಜಿಟರಿ ಭಾಗೀದಾರನ ಕಾರ್ಯಗಳನ್ನು ಬರೆಯಿರಿ.

## SECTION – C

Answer **any three** of the following. Question No. **13** is **compulsory** (case study). **(3×15=45)**
ಕೆಳಗಿನ ಬೇಕಾದ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರಶ್ನೆ ಸಂಖ್ಯೆ **13** ಕಡ್ಡಾಯವಾಗಿರುತ್ತದೆ (ಪ್ರಕರಣ ಅಧ್ಯಯನ).

8. Explain the characteristics of financial services.
ಹಣಕಾಸಿನ ಸೇವೆಗಳ ಲಕ್ಷಣಗಳನ್ನು ವಿವರಿಸಿರಿ.

9. What is meant by dematerialisation ? Describe its merits and demerits.
ಅಭೌತೀಕರಣ ಎಂದರೇನು ? ಅಭೌತೀಕರಣದ ಅನುಕೂಲತೆ ಮತ್ತು ಅನಾನುಕೂಲತೆಗಳನ್ನು ವಿವರಿಸಿರಿ.

10. What is lease ? Explain the advantages of leasing to the lessee.
ಗೇಣಿ ಎಂದರೇನು ? ಗೇಣಿದಾರನಿಗೆ ಗೇಣಿಯ ಅನುಕೂಲತೆಗಳನ್ನು ವಿವರಿಸಿರಿ.

11. Discuss the advantages and disadvantages of credit rating.
ಪತ್ತಿನ ಶ್ರೇಣೀಕರಣದ ಅನುಕೂಲತೆ ಹಾಗೂ ಅನಾನುಕೂಲತೆಗಳನ್ನು ಚರ್ಚಿಸಿರಿ.

Scanned by CamScanner

12. M/s. Neha Co. Ltd. is interested in purchasing an asset costing Rs. 10,00,000. It has two choices.

i) To borrow the amount at 20% p.a. interest repayable in 5 equal installments.

or

ii) To take asset on lease for a period of 5 years. The rent at the end of each year is Rs. 2,40,000. The company is the tax bracket of 50% p.a and follows a depreciation on reducing balance method at 20%. The asset will have salvage value of Rs. 3,50,000, at the end of five years.

The company is asking your advise whether buy the asset or take an asset on lease ?

**Note :**

1) The present value of Re. 1 at 10% discount factor is as follows :

| | | | |
|---|---|---|---|
| 1st year | 0.909 | 2nd year | 0.826 |
| 3rd year | 0.751 | 4th year | 0.683 |
| 5th year | 0.621 | | |

2) The present value and annuity of Re. 1 at 20% is Rs. 2.9906 for 5th year and @ 10% is Rs. 3. 791.

ಮೆ. ನೇಹಾ ಕಂ. ಲಿ. ಇದು ರೂ. 10,00,000 ಮೌಲ್ಯದ ಆಸ್ತಿಯನ್ನು ಖರೀದಿಸುವ ಆಲೋಚನೆಯಲ್ಲಿದೆ. ಅದಕ್ಕೆ ಎರಡು ಆಯ್ಕೆಗಳಿವೆ.

i) ಈ ಹಣವನ್ನು ಶೇ. 20 ರಂತೆ ಸಾಲ ಪಡೆದು ಸಮನಾದ 5 ವಾರ್ಷಿಕ ಕಂತುಗಳಲ್ಲಿ ಹಿಂದಿರುಗಿಸುವುದು.

ಅಥವಾ

ii) ಆಸ್ತಿಯನ್ನು ಗೇಣಿಯ ಮೂಲಕ 5 ವರ್ಷಗಳವರೆಗೆ ಪಡೆಯುವುದು. ಹೀಗಾಗಿ ಪ್ರತಿ ವರ್ಷಕ್ಕೆ ಪಾವತಿಸುವ ಬಾಡಿಗೆಯು ರೂ. 2,40,000 ರಷ್ಟಾಗುತ್ತದೆ. ಕಂಪನಿಯು ಶೇ. 50 ರ ತೆರಿಗೆಗೆ ಒಳಪಟ್ಟಿದೆ. ಈ ಕಂಪನಿಯಲ್ಲಿ ಶೇ. 20ರಷ್ಟು ಸವಕಳಿಯನ್ನು ಆಸ್ತಿಯ ಇಳಿಮುಖ ಶಿಲ್ಕು ಪದ್ಧತಿಯಂತೆ ಮಾಡುತ್ತಾರೆ. ಆಸ್ತಿಯ ಆಯುಷ್ಯವು ಮುಗಿದ ನಂತರ ಅದರ ಉಳಿಕೆಯ ಮೌಲ್ಯವು 5 ವರ್ಷದ ನಂತರ ರೂ. 3,50,000 ದೊರೆಯಬಹುದು.

ಈ ಸಂದಿಗ್ಧ ಸ್ಥಿತಿಯಲ್ಲಿ ಕಂಪನಿಯು ಆಸ್ತಿಯನ್ನು ಖರೀದಿಸಬೇಕೇ ಅಥವಾ ಗೇಣಿಗಾಗಿ ಪಡೆಯಬೇಕೇ? ಎಂಬುದರ ಬಗ್ಗೆ ಸಲಹೆ ನೀಡಿರಿ.

**ಸೂಚನೆ :**

1) ಶೇ. 10 ರ ಕಡಿತದ ದರದಂತೆ ರೂ. 1 ರ ಸದ್ಯದ ನಿವ್ವಳ ಮೌಲ್ಯ ಈ ಕೆಳಗಿನಂತಿದೆ :

| | | | |
|---|---|---|---|
| 1ನೇ ವರ್ಷ | 0.909 | 2ನೇ ವರ್ಷ | 0.826 |
| 3ನೇ ವರ್ಷ | 0.751 | 4ನೇ ವರ್ಷ | 0.683 |
| 5ನೇ ವರ್ಷ | 0.621 | | |

2) ಶೇ. 20ರ ಕಡಿತದ ದರದಂತೆ ರೂ. 1 ವಾರ್ಷಿಕ ಆದಾಯದ ಮೊತ್ತ 5 ವರ್ಷಗಳ ನಂತರ ರೂ. 2.9906 ಆದರೆ ಶೇ. 10 ರಂತೆ ರೂ. 3.791 ಇರುತ್ತದೆ.

Scanned by CamScanner

13. A) ABC Electrical Co. Ltd. is manufacturing electronics goods and supplies the product to various wholesalers and retailers. But the company found maximum dues from the purchasers. Hence, the company is thinking about whether to create a credit collection department or to go for making agreement with factors.

You are requested to advice the ABC company whether to go for factoring or not. If yes explain the advantages of factoring.

B) Mr. BES is having Rs. 10,00,000. He is thinking about investing the money in mutual fund scheme. As a financial expert advice Mr. BES, how the mutual fund scheme is better than investing in banking companies and write the benefit of mutual funds.

C) Mr. Pavan has purchased many company shares before introducing Demat Accounting System. But now Mr. Pavan wants to open the Demat Account to make the daily transactions. As a depository participant advice the investor regarding process of opening of demat account.

A) ABC ಎಲೆಕ್ಟ್ರಿಕಲ್ ಕಂಪನಿ ನಿಯಮಿತವು ಎಲೆಕ್ಟ್ರಾನಿಕ್ ವಸ್ತುಗಳನ್ನು ಉತ್ಪಾದಿಸುತ್ತಿದ್ದು, ಅನೇಕ ಸಟ್ಟಾ ವ್ಯಾಪಾರಸ್ಥರಿಗೆ ಮತ್ತು ಕಿರುಕುಳ ವ್ಯಾಪಾರಸ್ಥರಿಗೆ ಉದ್ದರಿ ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಆದರೆ ಇತ್ತಿತ್ತಲಾಗಿ ABC ಕಂಪನಿಗೆ ಬರಬೇಕಾದ ಬಾಕಿ ಹಣದ ಪ್ರಮಾಣವು ಹೆಚ್ಚಾಗಿರುತ್ತದೆ. ಆದ್ದರಿಂದ ABC ಕಂಪನಿಯು ಸಾಲ ವಸೂಲಿ ವಿಭಾಗವನ್ನು ರಚಿಸಬೇಕೋ ಅಥವಾ ಫ್ಯಾಕ್ಟರರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೋ ಎಂಬ ವಿಚಾರದಲ್ಲಿದ್ದಾರೆ. ಆದ್ದರಿಂದ ನೀವು ಒಬ್ಬ ತಜ್ಞರಾಗಿ ಫ್ಯಾಕ್ಟರಿಂಗ್ ಪದ್ಧತಿಯನ್ನು ಸ್ವೀಕರಿಸಬೇಕೋ ಅಥವಾ ಬೇಡವೋ ಎಂಬುದನ್ನು ತಿಳಿಸಿ. ಫ್ಯಾಕ್ಟರಿಂಗ್ ಪದ್ಧತಿ ಹೌದಾದರೆ ಇದರ ಅನುಕೂಲತೆಗಳನ್ನು ವಿವರಿಸಿರಿ:

B) ಶ್ರೀ ಬಿ. ಇ. ಎಸ್. ಇವರ ಹತ್ತಿರ ರೂ. 10,00,000 ಇರುತ್ತದೆ. ಇವರು ತಮ್ಮ ಹಣವನ್ನು ಪಾರಸ್ಪರಿಕ ನಿಧಿಯಲ್ಲಿ ಹೂಡಲು ವಿಚಾರಿಸುತ್ತಿದ್ದಾರೆ. ಆದ್ದರಿಂದ ನೀವು ಒಬ್ಬ ಉತ್ತಮ ಹೂಡಿಕೆ ಸಲಹೆಗಾರರಾಗಿ, ಪಾರಸ್ಪರಿಕ ನಿಧಿಯಲ್ಲಿ ಹಣವನ್ನು ಹೂಡುವುದು ಬ್ಯಾಂಕುಗಳಲ್ಲಿ ಹೂಡುವುದಕ್ಕಿಂತ ಹೇಗೆ ಹೆಚ್ಚು ಲಾಭದಾಯಕ ಎಂಬುದನ್ನು ತಿಳಿಸಿರಿ ಹಾಗೂ ಪಾರಸ್ಪರಿಕ ನಿಧಿ ಯೋಜನೆಯಲ್ಲಿರುವ ಅನುಕೂಲತೆಗಳನ್ನು ವಿವರಿಸಿರಿ.

C) ಶ್ರೀ ಪವನ್ ಇವರಲ್ಲಿ ಅನೇಕ ಕಂಪನಿಯ ಶೇರುಗಳನ್ನು ಅಭೌತೀಕರಣ ಲೆಕ್ಕ ಪದ್ಧತಿಯನ್ನು ಪರಿಚಯಿಸುವುದಕ್ಕಿಂತ ಮೊದಲೇ ಖರೀದಿಸಿರುತ್ತಾರೆ. ಆದರೆ ಶ್ರೀ ಪವನ್ ಇವರು ತಮ್ಮ ಶೇರು ವ್ಯವಹಾರವನ್ನು ಅಭೌತೀಕರಣ (Demat) ವ್ಯವಸ್ಥೆಯಡಿ ಮಾಡಲು ಇಚ್ಛಿಸುತ್ತಾರೆ. ಆದ್ದರಿಂದ ತಾವು ಒಬ್ಬ ಸಂಗ್ರಾಹಕ ಭಾಗಿದಾರರಾಗಿ (Depository participant) ಶ್ರೀ ಪವನ್ ಇವರಿಗೆ ಅಭೌತೀಕರಣ ತಖ್ತೆಯನ್ನು ತೆರೆಯುವ ವಿಧಾನಗಳನ್ನು ವಿವರಿಸಿರಿ.

Scanned by CamScanner